ಎರಡು ದಶಕಗಳ ಹಿಂದಿನವರೆಗೂ ಹಳ್ಳಿಗಳಲ್ಲಿ ಸರ್ವೇಸಾಮಾನ್ಯವಾಗಿ ಕಾಣಸಿಗುತ್ತಿದ್ದ ಈ ದೃಶ್ಯವನ್ನು ಒಮ್ಮೆ ನೆನಪಿಸಿಕೊಳ್ಳಿ:

ಊರ ಮುಂದಿನ ದೇವಾಲಯದ ಪ್ರಾಂಗಣದ (ನೂರಾರು ಹಳ್ಳಿಗಳಿಗೆ ಅಂತಹ ಪ್ರಾಂಗಣವೇ ಎಲ್ಲ ತರಗತಿಗಳಿಗೆ ‘ಆಲ್ ಇನ್ ಒನ್’ ಶಾಲಾ ಕೊಠಡಿಯಾಗಿದ್ದ ದಿನಗಳವು) ತುಂಬಾ ಮಕ್ಕಳೇ ಮಕ್ಕಳು. ಬಿಳಿಬಣ್ಣದ ನೆಹರೂ ಶರ್ಟ್ ಹಾಗೂ ಅಷ್ಟೇ ಪರಿಶುಭ್ರವಾಗಿದ್ದ ವಲ್ಲಿ ತೊಟ್ಟುಕೊಂಡು, ಮೂಗಿನ ಮೇಲೆ ದಪ್ಪ ಫ್ರೇಮಿನ ಕನ್ನಡಕ ಇಟ್ಟುಕೊಂಡು, ಕೈಯಲ್ಲೊಂದು ಹಸಿ ಬರ್ಲನ್ನೂ ಹಿಡಿದುಕೊಂಡು ನಿಂತ ಆ ಮೇಷ್ಟ್ರಿಗೆ ಸಂಜೆತನಕ ಒಂದೇ ಕೆಲಸ. ಅದೇ ಪಾಠ ಮಾಡುವುದು.

ವಾಟ್ಸ್ ಆ್ಯಪ್‌ನಲ್ಲಿ ಕಳೆದ ವಾರ ಸಿಕ್ಕಾಪಟ್ಟೆ ಹರಿದಾಡಿದ ಈ ‘ಸುದ್ದಿ’ಯ ಮೇಲೊಮ್ಮೆ ಈಗ ಕಣ್ಣಾಡಿಸಿ:

ಅರಸೀಕೆರೆಯ ರೈಲ್ವೆ ಪ್ಲಾಟ್‌ಫಾರ್ಮ್ ಬಳಿ ವ್ಯಕ್ತಿಯೊಬ್ಬರನ್ನು ಪೊಲೀಸರು ವಶಕ್ಕೆ ಪಡೆದಿದ್ದರು. ಅವರ ಬಳಿ ಒಂದು ಕೈಚೀಲ, ಅದರೊಳಗೆ ಹತ್ತಾರು ಪ್ಲಾಸ್ಟಿಕ್ ಕವರ್‌ಗಳು, ಒಂದೊಂದರಲ್ಲೂ ಏನೇನೋ ಕಾಗದಗಳು.

ಚೀಲವನ್ನು ಹೆಗಲಿಗೇರಿಸಿಕೊಂಡು ಮೊಬೈಲ್ ಆನ್ ಮಾಡಿಕೊಂಡು ಅತ್ತಿತ್ತ ನೋಡುತ್ತಾ ಹೋಗುವುದು, ಇದ್ದಕ್ಕಿದ್ದಂತೆ ಆ ಚೀಲದಲ್ಲಿದ್ದ ಕಾಗದಗಳನ್ನು ತೆಗೆದು ಹರಡಿಕೊಂಡು ಕೂರುವುದು, ಮತ್ತೆ ಎದ್ದು ಬೇರೆಡೆ ಹೋಗುವುದು, ತಲೆ ಕೆರೆದುಕೊಳ್ಳುತ್ತಾ, ಏನನ್ನೋ ಗೊಣಗುವುದು – ಹೀಗೆ ವಿಚಿತ್ರವಾಗಿದ್ದ ಅವರ ನಡೆ ಕಂಡು ಸ್ಥಳೀಯರು ಅವರೊಬ್ಬ ಮಕ್ಕಳ ಕಳ್ಳನೇ ಇರಬೇಕೆಂದು ಪೊಲೀಸರಿಗೆ ಸುದ್ದಿ ಮುಟ್ಟಿಸಿದ್ದರು.

ಶರ್ಲಾಕ್ ಹೋಮ್ ಕೈಯಲ್ಲಿರುವ ಮ್ಯಾಗ್ನಿಫೈಯಿಂಗ್ ಲೆನ್ಸ್‌ನಂತೆ ಮೊಬೈಲ್ ಹಿಡಿದು ಅತ್ತಿತ್ತ ಅಲೆದಾಡುತ್ತಿರುವಾತ ಬಾಂಬ್ ಇಡಲು ಸ್ಥಳ ಹುಡುಕುತ್ತಿರಬಹುದು ಎಂದು ಅನುಮಾನಿಸಿದ ಪೊಲೀಸರು, ಆ ವ್ಯಕ್ತಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದರು. ಆಗ ಗೊತ್ತಾಗಿದ್ದು ಏನೆಂದರೆ, ಆ ವ್ಯಕ್ತಿಯೊಬ್ಬ ಸರ್ಕಾರಿ ಶಾಲೆಯ ಮುಖ್ಯ ಶಿಕ್ಷಕ. ಮಕ್ಕಳ ಸ್ಕಾಲರ್‌ಷಿಪ್ ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ಭರ್ತಿ ಮಾಡಲು ನೆಟ್‌ವರ್ಕ್ ಸಿಗುವ ಪ್ರದೇಶ ಹುಡುಕುತ್ತಾ ಅವರು ಸಾಗುತ್ತಿದ್ದರು. ಅವರ ಚೀಲದಲ್ಲಿದ್ದ ಕಾಗದಗಳೆಲ್ಲ ಮಕ್ಕಳಿಗೆ ಸಂಬಂಧಿಸಿದ



nಚಿಕಿತ್ಸಕ ನೋಟ: ಶೈಕ್ಷಣಿಕ, ಮಾನಸಿಕ ಆರೋಗ್ಯದ ಜೊತೆಗೆ ಮಕ್ಕಳ ದೈಹಿಕ ಆರೋಗ್ಯದ ಚಟುವಟಿಕೆಗಳಿಗೂ ಶಿಕ್ಷಕರು ಗಮನಹರಿಸಬೇಕು.

ನಲಿ ಕಲಿ: ಮಕ್ಕಳಿಗೆ ಕಲಿಸುತ್ತಾ ತಾವೂ ಕಲಿಯುವ ಶಿಕ್ಷಕ ವೃಂದದ ಪಾಲಿಗೆ ಶಿಕ್ಷಣ ಎನ್ನುವುದು ಶಿಸ್ತೂ ಹೌದು, ಶಿಕ್ಷೆಯೂ ಹೌದು.

